ಡಿ.ಡಬ್ಲ್ಯೂ -1

**<u>ಸಾಕ್ಷಿಯನ್ನು ದಿ 03.06.2026 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಡಿ.ಎಸ್. ವಕೀಲರಿಂದ.</u>**

ಓ.ಎಸ್. 415/2017 ರಲ್ಲಿ ನಾನು ಗಿರಿಯಪ್ಪನವರ ಸಾಕು ಮಗ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ದತ್ತು ಕಾರ್ಯಕ್ರಮಕ್ಕೆ ಬಂದಿದ್ದ ರಂಗಸ್ವಾಮಯ್ಯ, ಗೌರಮ್ಮ, ನಂಜುಂಡಯ್ಯ ಇನ್ನೂ ಜೀವಂತ ಇರುತ್ತಾರೆ. ದಾವಾ ಆಸ್ತಿಗಳಿಗೆ ಸಂಬಂಧಿಸಿದ ಖಾತೆಗಳನ್ನು 2017 ನೇ ಸಾಲಿನಲ್ಲಿ ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ. ನಿ.ಡಿ. 13, ನಿ.ಡಿ. 16, ನಿ.ಡಿ. 17 ಮತ್ತು ನಿ.ಡಿ.18 ರಲ್ಲಿ ನಾನು ಗಿರಿಯಪ್ಪನವರ ಸಾಕು ಮಗ ಅಥವಾ ದತ್ತಕ ಮಗ ಎಂದು ಬರೆಸಿಲ್ಲ ಎಂದರೆ ಸರಿ. ನಾನು ಪುರಸಭೆ ಮುಖ್ಯಾಧಿಕಾರಿ ಕುಣಿಗಲ್ ಮತ್ತು ಪೊಲೀಸ್ ನಿಗ್ರಹ ದಳ, ತುಮಕೂರು ಇವರಲ್ಲಿ ಯಾವುದೇ ದಾಖಲೆಗಳಲ್ಲಿ ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ನನ್ನ ಹೆಸರಿಗೆ ಆದ ಖಾತೆಯನ್ನು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ವಾದಿಗಳಿಗೆ ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಿ.ಡಿ. 17 ರ ಎರಡನೆಯ ಪುಟದಲ್ಲಿರುವ ಅರ್ಜಿಯನ್ನು ನಾನೇ ಸಲ್ಲಿಸಿದ್ದು ಅದರಲ್ಲಿ ನಾನು ಗಿರಿಯಪ್ಪನವರ ಸಾಕು ಮಗ ಎಂದು ತೋರಿಸಿರುತ್ತೇನೆ ಎಂದರೆ ಸರಿ. ಗಿರಿಯಪ್ಪ ನನ್ನನ್ನು ದತ್ತು ತೆಗೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ಅಂಕಪಟ್ಟಿಯ ನಕಲು ಪ್ರತಿಯನ್ನು ತೋರಿಸಲಾಗಿ ಅದು ತಮಗೆ ಸೇರಿದ ಅಂಕಪಟ್ಟಿ ಆಗಿರುತ್ತದೆ ಎಂದು ನೋಡಿ ಗುರುತಿಸಿದ ಕಾರಣ ಅದನ್ನು ನಿ.ಪಿ.14 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನಿ.ಪಿ. 14 ರಲ್ಲಿರುವ ಸಹಿ ನನ್ನದಲ್ಲ ಎಂದು ನುಡಿಯುತ್ತಾರೆ. ನನ್ನ ಜನ್ಮ ದಿನಾಂಕ 07.08.1984 ಆಗಿರುತ್ತದೆ. ನಿ.ಡಿ. 18 ರಲ್ಲಿ ದಿನಾಂಕ 09.06.1984 ಎಂದು ಇದೆ ಎಂದರೆ ಸರಿ. ಸಾಕ್ಷಿ ನನ್ನ ಸರಿಯಾದ ಜನ್ಮ ದಿನಾಂಕ 07.08.1984 ಎಂದು ನುಡಿಯುತ್ತಾರೆ. ನಿ.ಡಿ. 18 ದಾಖಲೆಯನ್ನು ತಯಾರಿಸಲು ನನ್ನ ಹೆಂಡತಿ ಮಾಹಿತಿಯನ್ನು ನೀಡಿರುತ್ತಾರೆ. ನಿ.ಡಿ.18 ರಲ್ಲಿ ತಪ್ಪಾಗಿರುವ ಮಾಹಿತಿಯನ್ನು ತಿದ್ದುಪಡಿ ಮಾಡಲು ನಾನು ಪ್ರಯತ್ನಪಟ್ಟಿಲ್ಲ. ನಾನು ನಿಜ ಸಂಗತಿಯನ್ನು ಮರೆಮಾಚಿ ನನಗೆ ಬೇಕಾದ ಹಾಗೆ ಜನ್ಮ ದಿನಾಂಕವನ್ನು ಬರೆಸಿರುತ್ತೇನೆಂದರೆ ಸರಿಯಲ್ಲ. ನಾನು ಗಿರಿಯಪ್ಪನವರಿಗೆ ಸಾಕುಮಗ ಅಥವಾ ದತ್ತಕ ಮಗ ಆಗಿರದೇ ಇದ್ದರೂ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ. 24 ರಿಂದ 27 ದಾಖಲೆಗಳನ್ನು ಈ ದಾವೆಗೋಸ್ಕರ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವತ್ತೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.

ಡಿ.ಡಬ್ಲ್ಯೂ -1